*Vol. 2, No. 2, Jul-Dec, 2022* *ISSN 2583-0708*

KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ಅಭಿವೃದ್ಧಿ ಸಂವಹನದಲ್ಲಿ ಕನ್ನಡ ಚಲನಚಿತ್ರಗಳು: ಪುಟ್ಟಕ್ಕನ ಹೈವೆ ಸಿನಿಮಾದ ಒಂದು ವಿಶ್ಲೇಷಣೆ

**ಸಚಿನ್ ಎನ್. ಜೆ.** ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577 451 ಶಿವಮೊಗ್ಗ, ಕರ್ನಾಟಕ. Email: sachinnj06@gmail.com

**ಸತೀಶ್ ಕುಮಾರ್,** ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577 451 ಶಿವಮೊಗ್ಗ, ಕರ್ನಾಟಕ. Email: sathishandinje@gmail.com

---

***ಸಾರಾಂಶ:*** *ಭಾರತೀಯ ಚಲನಚಿತ್ರರಂಗದಲ್ಲಿ ಪ್ರಾದೇಶಿಕ ಭಾಷಾ ಚಲನಚಿತ್ರಗಳ ಪ್ರಾಮುಖ್ಯತೆ ಮಹತ್ವದ್ದು, ಈ ನಿಟ್ಟಿನಲ್ಲಿ ಮರಾಠಿ, ಗುಜರಾತಿ, ಬೆಂಗಾಳಿ, ಮಲಯಾಳಂ ಮತ್ತು ಕನ್ನಡ ಚಲನಚಿತ್ರರಂಗಗಳು ಅತೀ ಹೆಚ್ಚು ಕಲಾತ್ಮಕ ಚಲನಚಿತ್ರಗಳನ್ನು ಹೊರತಂದು ರಾಷ್ಟ್ರೀಯ ಮನ್ನಣೆಯನ್ನು ಗಳಿಸಿವೆ. ಕನ್ನಡ ಚಲನಚಿತ್ರರಂಗವು ತಮ್ಮ ಪ್ರಾದೇಶಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವುದಲ್ಲದೆ, ಆಯಾ ಕಾಲಘಟ್ಟಕ್ಕೆ ತಕ್ಕಂತಹ ಅಭಿವೃದ್ಧಿ ಆಯಾಮಗಳನ್ನು ಚಲನಚಿತ್ರದ ಮೂಲಕ ನೀಡಿ ಜನರನ್ನು ಮುಟ್ಟುವ ಕಾರ್ಯವನ್ನು ನಿರ್ದೇಶಕರು ಮಾಡುತ್ತಾ ಬಂದಿದ್ದಾರೆ. ಇಂತಹ ಅಭಿವೃದ್ಧಿ ಪೂರಕ ಚಲನಚಿತ್ರಗಳು ಕನ್ನಡದಲ್ಲಿ ಹಲವಾರು ತೆರೆಕಂಡಿದ್ದು, 2011ರಲ್ಲಿ ತೆರೆಕಂಡ ಬಿ. ಸುರೇಶ್ ನಿರ್ದೇಶನದ ಪುಟ್ಟಕ್ಕನ ಹೈವೆ ಪ್ರಮುಖವಾದದು. ಈ ಚಲನಚಿತ್ರದಲ್ಲಿ ಅಭಿವೃದ್ಧಿಯು ಸಾಮಾನ್ಯ ಜನರ ಮೇಲೆ ಯಾವ ರೀತಿಯಲ್ಲಿ ಪರಿಣಾಮಗಳನ್ನು ಬೀರಲಿದೆ ಎಂಬುದನ್ನುಚಿತ್ರಿಸಿದ್ದು, ಅದನ್ನು ವಿಶ್ಲೇಷಿಸುವುದು ಈ ಸಂಶೋಧನಾ ಪತ್ರಿಕೆಯ ಮುಖ್ಯ ಉದ್ದೇಶವಾಗಿದೆ. ಜೊತೆಗೆ ಅಭಿವೃದ್ಧಿಯು ವೈಯಕ್ತಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಂತಗಳಲ್ಲಿ ತಂದಿರುವ ಬದಲಾವಣೆಯ ಆಯಾಮಗಳನ್ನು ಗುಣಾತ್ಮಕ ವಿಷಯ ವಿಶ್ಲೇಷಣೆ ವಿಧಾನದ ಮೂಲಕ ಅಧ್ಯಯನಿಸಿ ಫಲಿತಾಂಶಗಳನ್ನು ದಾಖಲಿಸಲಾಗಿದೆ.*

**ಪ್ರಮುಖ ಪರಿಕಲ್ಪನೆಗಳು:** ಕನ್ನಡ ಚಲನಚಿತ್ರರಂಗ, ಅಭಿವೃದ್ಧಿ ಸಂವಹನ, ಕಲಾತ್ಮಕ ಚಲನಚಿತ್ರ, ವಿಷಯ ವಿಶ್ಲೇಷಣೆ.